ಯುದ್ಧದ ಭೀಕರತೆಯನ್ನೂ, ಜೀವನದ ಅಶಾಶ್ವತತೆಯನ್ನೂ, ಮನುಷ್ಯನ ಅಸಹಾಯಕತೆಯನ್ನೂ, ಕಾಲದ ನಿರ್ದಯತೆಯನ್ನೂ ಮಹಾಭಾರತದಂತೆ ಎತ್ತಿತೋರಿಸಿದ ಮತ್ತೊಂದು ಕೃತಿಯನ್ನು ವಾಙ್ಮಯ ಪ್ರಪಂಚದಲ್ಲಿಯೇ ಕಾಣಲಾಗದು. ಒಂದು ಲಕ್ಷಕ್ಕೂ ಅಧಿಕ ಸಂಖ್ಯೆಯ ಶ್ಲೋಕಗಳು, ನೂರಾರು ಉಪಕಥೆಗಳು, ಸಾವಿರಾರು ಪಾತ್ರಗಳ ಅನಂತ ಸ್ವಭಾವಗಳು, ಕಲ್ಪನೆಯನ್ನೂ ಮೀರಿದ ಚಿತ್ರವಿಚಿತ್ರ ವಿದ್ಯಮಾನಗಳು – ಇಂಥ ಬೃಹತ್ ಕೃತಿಯಲ್ಲಿ ಒಂದು ರಸವನ್ನು ಕಾಣಲಾದೀತೆ? ಹೌದು, ಮಹಾಭಾರತದಲ್ಲಿ ನವರಸಗಳೂ ಇರಬಹುದು; ಆದರೆ ಅದರ ಪ್ರಧಾನ ರಸ ಎಂದರೆ ಅದು ಶಾಂತರಸವೇ ಹೌದು. ಹೀಗೆಂದು ಹೇಳಿದವನು ಆನಂದವರ್ಧನ; ಅವನೂ ಕಾಶ್ಮೀರದವನೇ. ಮಾತ್ರವಲ್ಲ, ಮಹಾಭಾರತ ನಮ್ಮ ಪಾಲಿಗೆ 'ಇತಿಹಾಸ'ಗ್ರಂಥ ಎನ್ನುವುದನ್ನು ಇಲ್ಲಿ ಮೆಲುಕು ಹಾಕಿದಾಗ ಕಲ್ಹಣನ ಕಾಣ್ಕೆಯ ಹಿಂದಿರುವ ಸಂಪ್ರದಾಯದ ಸಾತತ್ಯವೂ ಅರಿವಾಗದಿರದು.

ಅಭಿನವಗುಪ್ತನು ಧ್ವನಿಸಿದ್ಧಾಂತದ ಮೂಲಕವಾಗಿ ಸಾಗಿ, ರಸಪ್ರಸ್ಥಾನವನ್ನು ಸ್ಥಾಪಿಸಿದ ಎಂದು ನೋಡಿದೆವು. ಆದರೆ ಕಾಶ್ಮೀರದಲ್ಲಿ ಕಾವ್ಯಮೀಮಾಂಸೆಯ ಇದೊಂದೇ ಸಿದ್ಧಾಂತ ಹುಟ್ಟಲಿಲ್ಲ ಎನ್ನುವುದೂ ಸ್ವಾರಸ್ಯಕರವಾದುದು. ವಕ್ರೋಕ್ತಿಯನ್ನು ಎತ್ತಿಹಿಡಿದ ಕುಂತಕನೂ, ಅನುಮಾನಪ್ರಸ್ಥಾನವನ್ನು ನಿರೂಪಿಸಿದ ಮಹಿಮಭಟ್ಟನೂ ಕೂಡ ಕಾಶ್ಮೀರದವರೇ. ವೈಚಾರಿಕ ಪರಂಪರೆಯಲ್ಲಿರಬೇಕಾದ ಪ್ರಖರತೆಯೂ ವೈವಿಧ್ಯವೂ ಸ್ವೋಪಜ್ಞತೆಯೂ ವೈಶಾಲ್ಯವೂ ಸ್ವಾತಂತ್ರ್ಯವೂ ಅಲ್ಲಿ ಕೇವಲ ಕಾವ್ಯಮೀಮಾಂಸೆಗಷ್ಟೆ ಸೀಮಿತವಾಗಿರಲಿಲ್ಲ; ಅಲ್ಲಿಯ ದಾರ್ಶನಿಕ ಪ್ರಸ್ಥಾನಗಳಲ್ಲಿಯೂ ಹಲವು ಸಿದ್ಧಾಂತಗಳ ನೆಲೆಯನ್ನೂ ಬೆಳೆಯನ್ನೂ ಕಾಣಬಹುದು. ಒಂದು ಸಣ್ಣ ಭೂಭಾಗದಲ್ಲಿ ಎಷ್ಟೊಂದು ಬಗೆಯಲ್ಲಿ ಸರಸ್ವತಿಯ ಪ್ರಜ್ಞಾಸ್ತರಗಳು ಕಾಣಿಸಿಕೊಂಡವು ಎನ್ನುವುದು ತುಂಬ ಮಹತ್ವದ ವಿದ್ಯಮಾನ. ಸಮಸ್ತ ಭರತಖಂಡದ ಮಾನಸಿಕತೆಯೇ ಆಗಿರುವ 'ವಿವಿಧತೆಯಲ್ಲಿ ಏಕತೆ' ಎಂಬ ಸೂತ್ರದ ಮೂಲಮಾತೃಕೆಯೊಂದು ಪ್ರಾಚೀನ ಕಾಶ್ಮೀರದ ಬೌದ್ಧಿಕ ಪರಂಪರೆಯಲ್ಲಿ ಸುಪ್ತವಾಗಿದ್ದಿರಬೇಕು. ಈ ಸೂತ್ರದ ಅನುಸಂಧಾನಕ್ಕೆ ಬೇಕಾದುದು ಸಾಮರಸ್ಯ ಎಂಬ ಮಹಾಮೌಲ್ಯ. ಇದರ ಅಭಿವ್ಯಕ್ತಿಯನ್ನು ಅಭಿನವಗುಪ್ತನ ಈ ಮಾತುಗಳಲ್ಲಿ ಕಾಣಬಹುದು:

ಪಾರಮೇಶ್ವರೇಷು ತಾವದಾಗಮೇಷು ಶೈವವೈಷ್ಣವ–ರಹಸ್ಯೇಷು ವೇದಾಂತೇ ಪುನಃ ಸ್ಪಷ್ಟ ಏವೋಕ್ತೋ ಅಯಮಸ್ಮದುಕ್ತೋಽರ್ಥಃ ತದನುಸಾರೇಣೈವ ಸುಗತೇನೋಕ್ತಂ ಚಿನ್ಮಾತ್ರಮಿದಂ ಯದುಕ್ತೇ ತ್ರೈಧಾತುಕಮಿತಿ ತದತ್ರ ವಿವರಣಕಾರೈಃ ದುರಭಿಮಾನ–ನಿವೇಶೇನ ಪ್ರತಾರಿತೋ



### ರಾಜನಿವಾಸ ಮುಬಾರಕ್ ಮಂಡಿ

ಜಮ್ಮುವಿನಲ್ಲಿರುವ ಈ ಅರಮನೆ, ಜಾಮ್ವಾಲ್ ವಂಶದ ರಾಜರ ಕಾಲದಿಂದಲೂ ಜಮ್ಮು ಕಾಶ್ಮೀರದ ರಾಜವಾಸಸ್ಥಾನವಾಗಿತ್ತು. 1925ರಲ್ಲಿ ಜಮ್ಮು ಕಾಶ್ಮೀರದ ಮಹಾರಾಜ ಹರಿಸಿಂಗ್ 'ಹರಿನಿವಾಸ್' ಅರಮನೆಗೆ ವಾಸಸ್ಥಾನ ಬದಲಾಯಿಸುವವರೆಗೆ ಈ ಅರಮನೆಯಲ್ಲಿಯೇ ಇದ್ದ. ತಾವಿ ನದಿ ದಂಡೆಯಲ್ಲಿರುವ ಈ ಅರಮನೆ ಈಗಲೂ ಪ್ರವಾಸಿಗರ ಆಕರ್ಷಣೆಯ ಕೇಂದ್ರವಾಗಿದೆ.




!ಉಚಿತ ಭವಿಷ್ಯ ಹೇಳುತ್ತಾರೆ!

ಬಹು ವರ್ಷಗಳಿಂದ ಜನರ ಪ್ರೀತಿ ವಿಶ್ವಾಸಗಳಿಸಿ ಫೋನಿನ ಮುಖಾಂತರ ಭವಿಷ್ಯವನ್ನು ಹೇಳುತ್ತಾರೆ.

ನಿಮ್ಮ ಜೀವನದ ಭವಿಷ್ಯ ತಿಳಿಸುತ್ತಾರೆ. ಗಂಡ–ಹೆಂಡತಿ ಕಿರಿಕಿರಿ, ಪ್ರೀತಿ–ಪ್ರೇಮ ವಿಚಾರ, ಶತ್ರುಗಳಿಂದ ತೊಂದರೆ, ಸಂತಾನ ಭಾಗ್ಯ, ಸಾಲಬಾಧೆ, ಪ್ರಮೋಷನ್, ವಿದೇಶ ಪ್ರಯಾಣ, ಜಮೀನಿನ ವಿಚಾರದಂತಹ ಯಾವುದೇ ಕಠಿಣ ಗುಪ್ತ ಸಮಸ್ಯೆಗಳಿದ್ದರು ಕೆಲವೇ ದಿನಗಳಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.

ಸ್ಥಳ: ಎಸ್. ಬಿ. ಆರ್. ಕಾಂಪ್ಲೇಕ್ಸ್, ಕಾರ್ಪೊರೇಷನ್ ಬ್ಯಾಂಕ್ ಪಕ್ಕದಲ್ಲಿ,
ಹೊಸೂರು ಮುಖ್ಯ ರಸ್ತೆ, ಚಂದಾಪುರ, ಬೆಂಗಳೂರು–560081

ಎಷ್ಟೋ ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದದ್ದರೆ ಇವರನ್ನೇ ಸಂಪರ್ಕಿಸಿ.

ಪಂ॥. ಎಸ್ ರಾಘವ ಜೋಷಿ
ಶ್ರೀ ಗುರು ರಾಘವೇಂದ್ರ ಸ್ವಾಮಿ ಆರಾಧಕರು

ಇವರನ್ನು ಸಂಪರ್ಕಿಸಿ ಅಥವಾ ಭೇಟಿಮಾಡಿ 9845777511/ 9901173383